# ನಗರಸಭೆ, ಚಿಕ್ಕಮಗಳೂರು

ಸಂಖ್ಯೆ:ಸಿಎಂಸಿ/ಎ10/ಸಿಆರ್.ಮೋ.ಪಂ.ದುರಸ್ತಿ/ಸಿಆರ್.1/2007–08. ದಿನಾಂಕ: 31–10–2007

## :ಟೆಂಡರ್ ಕರೆಯೋಲೆ:

ಚಿಕ್ಕಮಗಳೂರು ನಗರಕ್ಕೆ ನೀರು ಸರಬರಾಜು ಮಾಡುವ ಮುಗುಳವಳ್ಳಿ ಮಧ್ಯಂತರ ರೇಚಕ ಘಟಕದಲ್ಲಿರುವ 250 ಅಶ್ವ ಶಕ್ತಿಯ ಮೋಟಾರ್ ಪಂಪ್‌ಗಳನ್ನು ದುರಸ್ತಿಪಡಿಸಲು ಹಾಗೂ ಸಾಮಗ್ರಿ ಸರಬರಾಜು ಮಾಡಲು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್ ಸಲ್ಲಿಸಲು ಇಚ್ಛಿಸುವವರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಥವಾ ಸ್ಥಳೀಯ ಸಂಸ್ಥೆಗಳಲ್ಲಿ ಹೆಚ್ಚಿನ ಅಶ್ವಶಕ್ತಿಯ (250 ಕ್ಕೂ ಮೇಲ್ಪಟ್ಟು) ಮೋಟಾರ್ ಪಂಪ್‌ಗಳನ್ನು ದುರಸ್ತಿಪಡಿಸಿರುವ ಬಗ್ಗೆ ಅನುಭವವುಳ್ಳ ಸಂಸ್ಥೆಯವರು ಟೆಂಡರ್ ಸಲ್ಲಿಸಬಹುದಾಗಿದೆ. ಇಚ್ಛೆಯುಳ್ಳ ಸಂಸ್ಥೆಯವರು ಠೇವಣಿಯನ್ನು ಪೌರಾಯುಕ್ತರು,ನಗರಸಭೆ,ಚಿಕ್ಕಮಗಳೂರು ರವರ ಹೆಸರಿಗೆ ಟೆಂಡರ್ ಸಲ್ಲಿಸುವ ಮೊತ್ತಕ್ಕೆ ಶೇಕಡ 2.5 ರಷ್ಟು ಹಣವನ್ನು (ಠೇವಣಿಯಾಗಿ) ಡಿ.ಡಿ. ಅಥವಾ ನಗದಾಗಿ ಪಾವತಿಸಿದ ರಶೀದಿಯನ್ನು ಟೆಂಡರ್ ಜೊತೆ ಲಗತ್ತಿಸಿ ದಿನಾಂಕ:3–12–2007 ರಂದು ಸಂಜೆ 5–00 ಗಂಟೆಯೊಳಗೆ ಈ ಕೆಳಗೆ ಸಹಿ ಮಾಡಿರುವವರಿಗಾಗಲೀ ಅಥವಾ ಅವರಿಂದ ಅಧಿಕಾರ ಹೊಂದಿರುವವರಿಗಾಗಲೀ ಟೆಂಡರ್ ಸಲ್ಲಿಸುವುದು. ನಂತರ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಸಾಧ್ಯವಾದಲ್ಲಿ ಟೆಂಡರ್‌ಗಳನ್ನು ದಿನಾಂಕ:3–12–2007 ರಂದು ಸಂಜೆ 5–30 ಕ್ಕೆ ಹಾಜರಿದ್ದ ಸಂಸ್ಥೆಯವರ ಸಮ್ಮುಖದಲ್ಲಿ ತೆರೆಯಲಾಗುವುದು. ಅಥವಾ ಟೆಂಡರ್ ತೆರೆಯುವ ಮುಂದಿನ ದಿನಾಂಕವನ್ನು ಈ ಕಛೇರಿಯ ಪ್ರಕಟಣಾ ಫಲಕದಲ್ಲಿ ಪ್ರಚುರಪಡಿಸಲಾಗುವುದು. ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸುವ ಹಾಗೂ ಖಾಲಿ ಟೆಂಡರ್ ಫಾರಂ ಪಡೆಯುವ ಕೊನೆಯ ದಿನಾಂಕ: 1–12–2007 ರಂದು ಸಂಜೆ 5–00 ಗಂಟೆವರೆಗೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ದಿನಾಂಕ:3–12–2007 ರಂದು ಸಂಜೆ 5–00 ಗಂಟೆಗೆ ಸಲ್ಲಿಸುವುದು.

### ::ಷರತ್ತುಗಳು::

1. ಟೆಂಡರ್‌ಗೆ ಭಾಗವಹಿಸುವ ಸಂಸ್ಥೆಯವರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ 250 ಅಶ್ವಶಕ್ತಿಯ ಮೇಲ್ಪಟ್ಟು ಮೋಟಾರ್ ಪಂಪ್‌ಗಳನ್ನು ದುರಸ್ಥಿಪಡಿಸುವ ಬಗ್ಗೆ ದೃಡೀಕರಣ ಪತ್ರವನ್ನು ಟೆಂಡರ್ ಜೊತೆ ಲಗತ್ತಿಸುವುದು. ಕಡ್ಡಾಯವಾಗಿರುತ್ತದೆ.
2. ಕೆಲಸ ಪೂರ್ಣಗೊಂಡ ನಂತರ ಶೇಕಡಾ 80 ರಷ್ಟು ಬಿಲ್ಲನ್ನು ಪಾವತಿಸಲಾಗುವುದು. ಉಳಿದ 20% ಹಣವನ್ನು ಕೆಲಸ ಪೂರ್ಣಗೊಂಡು 3 ತಿಂಗಳು ಕಳೆದ ನಂತರ ದುರಸ್ಥಿಪಡಿಸಿರುವ ಮೋಟಾರ್ ಪಂಪ್‌ಗಳ ಚಲನೆ ಬಗ್ಗೆ ಖಾತರಿಪಡಿಸಿಕೊಂಡು ಪಾವತಿಸಲಾಗುವುದು.
3. ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವು ನಗರಸಭೆಗೆ ಇರುತ್ತದೆ.

ಸಹಿ/-

ಪೌರ ಆಯುಕ್ತರು,

ನಗರಸಭೆ, ಚಿಕ್ಕಮಗಳೂರು.